ದಿನಾಂಕ ಃ 05-07-2018 ಓ ಎಸ್ ನಂ. 240/13

ಡಿ. ಡಬ್ಲ್ಯೂ - 2

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ವಾದಿ ಪರ ಶ್ರೀ. ಆರ್.ಎಸ್.ಕೆ. ವಕೀಲರಿಂದ</u>

ನಾನು 7 ನೇ ತರಗತಿವರೆಗೆ ಓದಿದ್ದೇನೆ. ನನಗೆ ಸಾಕ್ಷಿ ಹೇಳುವ ಸಂಬಂಧ ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ಈ ದಿನ 1 ನೇ ಪ್ರತಿವಾದಿ ಸಾಕ್ಷಿ ಹೇಳಲು ಬರುವಂತೆ ತಿಳಿಸಿದ್ದರಿಂದ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ವಾದಿಯು ಪ್ರತಿವಾದಿಯ ವಿರುದ್ಧ ಯಾವ ವಿಷಯಕ್ಕೆ ಕೇಸು ದಾಖಲಿಸಿದ್ದಾನೆ ಎಂದು ನನಗೆ ಮಾಹಿತಿ ಇಲ್ಲ, ಅದೇ ರೀತಿ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಏನು ಬರೆದು ಹಾಕಿದ್ದಾನೆ ಎಂದು ನನಗೆ ಮಾಹಿತಿ ಇಲ್ಲ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ ದಾವಾದ ಆಸ್ತಿಗೆ ಸಂಬಂಧಿಸಿದಂತೆ ಸಾಕ್ಷಿ ಹೇಳುವಂತೆ ಮಾಹಿತಿ ಕೊಟ್ಟಿದ್ದು 1 ನೇ ಪ್ರತಿವಾದಿ ಇರುತ್ತಾನೆ. ವಾದಿ ಮತ್ತು ಆತನ ಅಣ್ಣ ರುದ್ರಪ್ಪ ಇವರ ನಡುವೆ ಸಂಬಂಧ ಸರಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯರ ಮನೆತನಕ್ಕೆ ಸಂಬಂಧಿದಂತೆ ಈ ಜಮೀನಿನ ವಿಷಯವನ್ನು ಹೊರತುಪಡಿಸಿ ಬೇರೆ ಯಾವುದೇ ಪಂಚಾಯತಿ ಮಾಡಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಅವರ ತಂದೆಯರ ಕಾಲದಿಂದಲೂ ಬೇರೆ ಬೇರೆ ಆಗಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯನ್ನು ಮತ್ತು ವಾದಿಯ ತಂದೆಯವರನ್ನು ನೋಡಿದ್ದೇನೆ. ದಾವಾದ ಆಸ್ತಿಗೆ ಸಂಬಂಧಿಸಿದಂತೆ ಯಾರ ಕಡೆಯಿಂದ ಯಾವಾಗ ಜಮೀನುಗಳನ್ನು ಖರೀದಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ವಾದಿಯು ತಮ್ಮ ಜಮೀನುಗಳು ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಎಂದು ಅವುಗಳನ್ನು ಪಾಲು ಮಾಡಿ ಕೊಡುವಂತೆ ನಿಮ್ಮನ್ನು ಕರೆಯಲು ಬಂದಿದ್ದರಾ ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಮೂರು ಜನರು ಬಂದಿದ್ದರು ಎಂದು ನುಡಿಯುತ್ತಾರೆ. ಶಿವಪ್ಪನಿಗೆ ವಾದಿ ಮತ್ತು 2 ನೇ ಪ್ರತಿವಾದಿ ಇಬ್ಬರೇ ಮಕ್ಕಳ ಎಂದರೆ ಸರಿ. ಬಸವಣ್ಣೆಪ್ಪ ಈತನಿಗೆ 1 ಮತ್ತು 3 ನೇ ಪ್ರತಿವಾದಿಯರು ಇಬ್ಬರೇ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯವರು ಯಾವಾಗ ಮೃತಪಟ್ಟಿದ್ದಾರೆ ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಈ ವಾಟ್ನಿ ಆಗುವ ಪೂರ್ವದಲ್ಲಿಯೇ ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ತಂದೆಯವರೂ ಸಹ ಬಹಳ ದಿನಗಳ ಹಿಂದೆಯೇ ಮೃತಪಟ್ಟಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯವರು ಮೃತಪಟ್ಟ ನಂತರ ಆತನು ಖರೀದಿಸಿದ ಜಮೀನಿಗೆ

ವಾರಸಾನಾತೆಯಿಂದ ತನ್ನ ಖಾತೆಗೆ ಮಾಡಿಸಿಕೊಂಡಿದ್ದಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾಟ್ನಿ ಮಾಡುವ ಸಮಯದಲ್ಲಿ ನಾನು ಮತ್ತು ನಮ್ಮ ಊರಿನ ಚಂದ್ರಪ್ಪ ಲಗಮನ್ನನವರ ಸೇರಿದ್ದೆವು. ವಾಟ್ನಿ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯು ತಮ್ಮ ಮನೆತಕ್ಕೆ ಎಷ್ಟು ಆಸ್ತಿಗಳು ಇರುತ್ತವೆ ಎಂದು ನಮಗೆ ಯಾವುದೇ ದಾಖಲೆ ತೋರಿಸಿಲ್ಲ. ವಾಟ್ನಿ ಪತ್ರವನ್ನು ಬೈಲಹೊಂಗಲದಲ್ಲಿಯೇ ತಯಾರಿಸಿದ್ದು ಅದನ್ನು ಯಾರು ತಯಾರಿಸಿರುತ್ತಾರೆ ಎಂದು ಅವರ ಹೆಸರು ಈಗ ನನಗೆ ನೆನಪಿಲ್ಲ. ವಾಟ್ನಿ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಆಗ ನನಗೆ ಗೊತ್ತಿತ್ತು ಆದರೆ ಈಗ ಆ ವಿಷಯ ನನಗೆ ನೆನಪಿಲ್ಲ. ಸಾಕ್ಷಿ ಹೇಳಲು ಬರುವಾಗ 1 ನೇ ಪ್ರತಿವಾದಿ ವಾಟ್ನಿ ಪತ್ರವನ್ನು ನನಗೆ ತೋರಿಸಿಲ್ಲ. ವಾಟ್ನಿ ಪತ್ರ ಬರೆಯಲು ಮೂರು ಜನರು ಮಾಹಿತಿಯನ್ನು ವಾಟ್ನಿ ಪತ್ರ ಬರೆಯುವವರಿಗೆ ಮಾಹಿತಿ ಕೊಟ್ಟಿರುತ್ತಾರೆ. 5 ರೂ. ಸ್ಟ್ಯಾಂಪ ಮೇಲೆ ವಾಟ್ನಿ ಪತ್ರ ಬರೆದಿರುತ್ತಾರೆ. ವಾಟ್ನಿ ಪತ್ರದಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಆಸ್ತಿಗಳು ಹೋಗಬೇಕು ಎಂದು ನಾನು ಹೇಳಿ ಬರೆಸಿಲ್ಲ. ವಾಟ್ನಿ ಮಾಡುವ ಪೂರ್ವದಲ್ಲಿಯೇ ನಾವೇ ಹಿರಿಯರು ಕೂಡಿಕೊಂಡು ಆಸ್ತಿಗಳನ್ನು ಅಳತೆ ಮಾಡಿರುತ್ತೇವೆ. ವಾದಿಗೆ ಯಾವ ಸರ್ವೆ ನಂಬರನ ಎಷ್ಟು ವಿಸ್ತೀರ್ಣದ ಆಸ್ತಿ ಹೋಗಿರುತ್ತದೆ ಎಂದು ಈಗ ನನಗೆ ಗೊತ್ತಿಲ್ಲ. ಆತನಿಗೆ ಹೋದ ಜಮೀನಿನ ಚಕಬಂದಿ ಹೇಳಲು ಬರುವುದಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಕೂಡಿ ಇರುತ್ತಾರೆ ಎಂದು ನಾನು ಯಾವುದೇ ದಾಖಲೆ ನೋಡಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ಕೂಡಿಯೇ ವ್ಯವಹಾರ ಮಾಡುತ್ತಾರೆ ಎಂದು ನಾನು ಯಾವುದೇ ದಾಖಲೆ ನೋಡಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ಮಧ್ಯ ವ್ಯವಹಾರ ಆಗಿದ್ದರ ಬಗ್ಗೆ 1 ನೇ ಪ್ರತಿವಾದಿ ನನಗೆ ಯಾವುದೇ ಮಾಹಿತಿ ನೀಡಿಲ್ಲ. ವಾಟ್ನಿ ಮಾಡುವ ಪೂರ್ವದಲ್ಲಿ ವಾದಿಯು ತಮ್ಮ ಮಧ್ಯ ಅಪಸಾತ ವಾಟ್ನಿ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನಮಗೆ ತೋರಿಸಿಲ್ಲ. ವಾಟ್ನಿ ಪತ್ರವನ್ನು ತಹಶೀಲ್ದಾರ ಕಚೇರಿಯಲ್ಲಿ ಬರೆಸಿರುತ್ತಾರೆ.

ಬಾಂಡನ್ನು 2 ನೇ ಪ್ರತಿವಾದಿ ತೆಗೆದುಕೊಂಡು ಬಂದಿರುತ್ತಾರೆ. ವಾದಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರು ತಮ್ಮ ಮನೆಯ ಹಿರಿತನ ಮಾಡುವ ಸಂಬಂಧ ನನ್ನನ್ನು ಕರೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯೊಂದಿಗೆ ಕೂಡಿಕೊಂಡು ವಾದಿಯ ಖೊಟ್ಟಿ ಹೆಬ್ಬಟ್ಟಿನ ಸಹಿಯನ್ನು ಮಾಡಿಕೊಂಡು ಒಂದು ಖೊಟ್ಟಿ ದಾಖಲೆಯನ್ನು ತಯಾರಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ

ಮೊದಲಿನಿಂದಲೂ ಪರಿಚಯ ಎಂದರೆ ಸಾಕ್ಷಿಯು ಮೂರು ಜನರು ನನಗೆ ಮೊದಲಿನಿಂದಲೂ ಪರಿಚಯಸ್ಥರು ಎಂದು ನುಡಿಯುತ್ತಾರೆ. ನಿಡಿ-9(ಎ) ದಲ್ಲಿ ಇರುವ ಹೆಬ್ಬೆಟ್ಟಿನ ಸಹಿಯು ವಾದಿಯದು ಅಲ್ಲ ಎಂದರೆ ಸರಿಯಲ್ಲ. ನಿಡಿ-9(ಎ) ದಲ್ಲಿ ಇರುವ ವಾದಿಯ ಹೆಬ್ಬೆಟ್ಟಿನ ಸಹಿಯ ಹತ್ತಿರ ಇದು ವಾದಿಯದೇ ಹೆಬ್ಬೆಟ್ಟಿನ ಸಹಿ ಇರುತ್ತದೆ ಎಂದು ಯಾರು ಗುರುತು ಹಾಕಿದ ಸಹಿ ಮಾಡಿಲ್ಲ ಎಂದರೆ ಸರಿ. ವಾದಿಯ ತಂದೆಯವರು ಖರೀದಿಸಿದ ಆಸ್ತಿಗಳನ್ನು ಪಡೆಯಬೇಕೆಂಬ ದುರುದ್ದೇಶದಿಂದ ಆತನ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಂಡು ಒಂದು ಖೊಟ್ಟಿ ದಾಖಲೆಯನ್ನು ತಯಾರಿಸಿಕೊಂಡು 1 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಖೊಟ್ಟಿ ವಾಟ್ನಿ ಪತ್ರದ ಪ್ರಕಾರ ಖೊಟ್ಟಿ ಮ್ಯುಟೇಷನನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ವಾಟ್ನಿ ಪತ್ರದಂತೆ ವಾದಿಯು ಯಾವತ್ತೂ ಆಸ್ತಿಗಳನ್ನು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿಲ್ಲ ಮತ್ತು ವಾಟ್ನಿ ಪತ್ರವನ್ನು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ವಾಟ್ನಿ ಪತ್ರದಲ್ಲಿ ಸರ್ವೆ ನಂ 84/1 ಬ, 95/2, 94/8, 15/3 ಬ ಈ ನಾಲ್ಕೂ ಆಸ್ತಿಗಳನ್ನು ವಾದಿಯ ತಂದೆಯವರು ತಮ್ಮ ಸ್ವಂತ ಹಣದಿಂದ ಖರೀದಿಸಿದ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ಇಬ್ಬರೂ ಕೂಡಿ ಇರುವಾಗ ಖರೀದಿಸಿದ ಆಸ್ತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಈಗ ಹೇಳಿದ ಆಸ್ತಿಗಳಲ್ಲಿ 1 ನೇ ಪ್ರತಿವಾದಿಯ ತಂದೆಯವರ ಹೆಸರು ಸಾಮೂಹಿಕವಾಗಿ ದಾಖಲಾಗಿದ್ದರ ಬಗ್ಗೆ ನಾನು ಪಹಣಿ ಪತ್ರಿಕೆ ನೋಡಿಲ್ಲ. ನನಗೆ ಈ ದಾವಾದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ 1 ನೇ ಪ್ರತಿವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಟ್ನಿ ಮಾಡುವ ಸಮಯದಲ್ಲಿ 3 ನೇ ಪ್ರತಿವಾದಿ ಹಾಜರು ಇದ್ದರು ಎಂದು ತೋರಿಸಲು ವಾಟ್ನಿ ಪತ್ರದಲ್ಲಿ ಆಕೆಯ ಸಹಿ ಪಡೆದಿಲ್ಲ

ಪಾಟೀ ಸವಾಲು ಃ 2 ನೇ ಪ್ರತಿವಾದಿ ಪರ ವಕೀಲರಿಂದ

2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ದಿನಾಂಕ ಃ **05-07-2018** ಓ ಎಸ್ ನಂ. **240/13**

ಡಿ. ಡಬ್ಲ್ಯೂ - **3**

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ವಾದಿ ಪರ ಶ್ರೀ. ಆರ್.ಎಸ್.ಕೆ. ವಕೀಲರಿಂದ</u>

ಈ ದಿನ ನಾನೇ ನ್ಯಾಯಾಲಯಕ್ಕೆ ಬಂದಿದ್ದೇನೆ. 1 ನೇ ಪ್ರತಿವಾದಿಯ ಸಲುವಾಗಿ ನ್ಯಾಯಾಲಯಕ್ಕೆ ಬಂದಿದ್ದೇನೆ. 1 ನೇ ಪ್ರತಿವಾದಿಯು ಈ ಕೇಸಿನ ಬಗ್ಗೆ ನನಗೆ ಮಾಹಿತಿ ಹೇಳಿರುತ್ತಾನೆ. ಈ ಕೇಸಿನಲ್ಲಿ ಏನು ಸಾಕ್ಷಿ ಹೇಳಬೇಕು ಎಂದು 1 ನೇ ಪ್ರತಿವಾದಿ ನನಗೆ ಮಾಹಿತಿ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಯಾವುದೇ ಸಂಬಂಧಿಸಿದಂತೆ ನಡೆದಿದೆ ಎಂದು ನನಗೆ ಸ್ವಂತ ಮಾಹಿತಿ ಇಲ್ಲ. ವಾದಿಯ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇರುತ್ತವೆ ಎಂದು ನನಗೆ ಸ್ವತಃ ಮಾಹಿತಿ ಇಲ್ಲ. ನನ್ನ ಜಮೀನಿನ ಸರ್ವೆ ನಂ. 15/3 ಇರುತ್ತದೆ, ಅದನ್ನು ಖರೀದಿಸಿದ್ದರ ಬಗ್ಗೆ ನಾನು ಯಾವುದೇ ಕಾಗದಪತ್ರ ಹಾಜರು ಮಾಡಿಲ್ಲ. ನನ್ನ ಹೆಸರಿಗೆ ಜಮೀನು ಇದೆ ಎಂದು ತೋರಿಸಲು ಪಹಣಿ ಪತ್ರಿಕೆ ಹಾಜರು ಮಾಡಿದ್ದೇನೆ. ನಾನು ಕಳೆದ 45 ವರ್ಷಗಳ ಹಿಂದೆ ನನ್ನ ಜಮೀನು ಖರೀದಿಸಿದ್ದೇನೆ ಆದರೆ ದಿನಾಂಕ ತಿಂಗಳು, ವರ್ಷ ನೆನಪಿಲ್ಲ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ಯಾರೂ ಮಾಹಿತಿ ಕೊಟ್ಟಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಯಾವುದಾದರೂ ಜಮೀನುಗಳ ದಾಖಲೆಗಳನ್ನು ನೋಡಿದ್ದೀರಾ ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು 15/3 ಬ ದಲ್ಲಿ ನಮ್ಮ ಜಮೀನಿನ ಪಕ್ಕದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 15/3 ಬ ಜಮೀನಿನ ಬಗ್ಗೆ ಮಾಹಿತಿ ಇರುತ್ತದೆ. 15/3 ಬ ಜಮೀನನ್ನು ಯಾರು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 15/3 ಬ ನ್ನು 1 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದಾನೆ ಎಂದು ಹೇಳಿದ್ದು ಆದರೆ ಯಾವ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. 15/3 ಬ ಜಮೀನನ್ನು ವಾದಿಯ ತಂದೆಯವರು ಖರೀದಿಸಿದ ಜಮೀನು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. 15/3 ಬ ಜಮೀನನ್ನು 1 ನೇ ಪ್ರತಿವಾದಿ ಸಾಗುವಳಿ ಮಾಡದೇ ಇದ್ದರೂ ಸಹ 1 ನೇ ಪ್ರತಿವಾದಿಯ ಮಾತನ್ನು ಕೇಳಿ ಆತನೇ ಸಾಗುವಳಿ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮಿನು ಸರ್ವೆ ನಂ. 15/3 ಅ ಗಾಗಲೀ, ಸರ್ವೆ ನಂ. 15/3 ಬ ಗೆ 1 ನೇ ಪ್ರತಿವಾದಿ ಹೆಸರಿನಲ್ಲಿ ಬೆಳೆ

ಪರಿಹಾರವನ್ನು ಕೊಟ್ಟಿಲ್ಲ.

ಪಾಟೀ ಸವಾಲು ಃ 2 ನೇ ಪ್ರತಿವಾದಿ ಪರ ವಕೀಲರಿಂದ

2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ